ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :**

ಅಪಘಾತವನ್ನು ನಾನು ನೋಡಿಲ್ಲ. ನನ್ನ ಗಂಡನನ್ನು ಪ್ರೀತಮ್ ಎನ್ನುವವರು ಬಂದು ಮನೆಯಿಂದ ಕರೆದುಕೊಂಡು ಹೋಗಿರುತ್ತಾರೆ. ಅವರು ದ್ವಿಚಕ್ರ ವಾಹನದಲ್ಲಿ ಹೋಗಿದ್ದು, ಪ್ರೀತಮ್ ಬೈಕನ್ನು ಚಲಾಯಿಸುತ್ತಿದ್ದರು. ಕೆರೆಮೇಗಲಕೊಪ್ಪಲಿನಿಂದ ಕೆ.ಬೆಟ್ಟಹಳ್ಳಿಗೆ ಹೋಗಿದ್ದು, ವಾಪಾಸ್ಸು ಬರುವಾಗ ಎದುರುನಿಂದ ಬಂದ ವಾಹನವನ್ನು ತಪ್ಪಿಸಲು ಪಕ್ಕಕ್ಕೆ ಹೋದಾಗ ಬಿದ್ದು ಅಪಘಾತವಾಗಿರುತ್ತದೆ. ಬೈಕಿನಿಂದ ನನ್ನ ಗಂಡ ಹಾಗೂ ಪ್ರೀತಮ್ ಇಬ್ಬರೂ ಬಿದ್ದಿರುತ್ತಾರೆ. ಪ್ರೀತಮ್ ರವರಿಗೂ ಮಂಡಿಗೆ ಗಾಯವಾಗಿದ್ದು ಸ್ಪಂದನಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ.

**2.** ನನ್ನ ಗಂಡ ದ್ವಿಚಕ್ರ ವಾಹನದಿಂದ ಬಿದ್ದು ಗಾಯ ಮಾಡಿಕೊಂಡಿದ್ದು, ಎದುರಿನಿಂದ ಯಾವುದೇ ವಾಹನ ಬಂದಿರುವುದಿಲ್ಲ ಎಂದರೆ ಸುಳ್ಳು. ನಾನು ಹೇಳಿದಂತೆ ಪ್ರೀತಮ್ ರವರು ಬಿದ್ದು ಗಾಯ ಮಾಡಿಕೊಂಡಿಲ್ಲ ಎಂದರೆ ಸುಳ್ಳು. ನನ್ನ ಗಂಡನ ನಿರ್ಲಕ್ಷ್ಯತನದಿಂದ ಅವರೇ ಬಿದ್ದು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

**3.** ನನ್ನ ಗಂಡ ಮಾಸಿಕವಾಗಿ ರೂ.1,50,000/- ಸಂಪಾದನೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ. ನನ್ನ ಗಂಡ ಇನ್ನೋವಾ ಕ್ರಿಸ್ಟಾ ವಾಹನವನ್ನು 2023 ರಲ್ಲಿ ಖರೀದಿಸಿದ್ದು, ಅದನ್ನು ಬಾಡಿಗೆಗೆ ಚಾಲನೆ ಮಾಡುತ್ತಿದ್ದರು. 4 ವರ್ಷ ಕರಾರು ಮಾಡಿಕೊಂಡು VTT ಕಂಪನಿಗೆ ಚಾಲನೆಗೆ ಹೋಗುತ್ತಿದ್ದರು. ಕಂಪನಿ ಹೆಸರಿನಲ್ಲಿ ಕಾರನ್ನು ಖರೀದಿಸಿದ್ದೆವು, 4 ಲಕ್ಷ ರೂ.ಗಳನ್ನು ಠೇವಣಿ ಇಟ್ಟಿದ್ದೆವು. ಬೇರೆ ಕಂಪನಿಗೆ ವಾಹನ ಚಾಲನೆ ಮಾಡುವಂತಿರಲಿಲ್ಲ, 4 ವರ್ಷಗಳ ನಂತರ ನಮ್ಮ ಹೆಸರಿಗೆ ವಾಹನ ನೋಂದಣಿ ಮಾಡಿಕೊಡುತ್ತಿದ್ದರು, ಪ್ರತಿ ತಿಂಗಳು ರೂ.50,000/- ಗಳನ್ನು EMI

ಕಟ್ಟುತ್ತಿದ್ದೆವು. ರೂ.1,05,000/- ಗಳನ್ನು ಕಂಪನಿಯವರು ನನ್ನ ಗಂಡನ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ಜಮೆ ಮಾಡುತ್ತಿದ್ದರು. ಕಂಪನಿಯ ಜೊತೆ ಮಾಡಿಕೊಂಡ ಕರಾರು ಪತ್ರವು ಕಳೆದುಹೋಗಿದ್ದು, ಕಂಪನಿಯವರನ್ನು ಕೇಳಿದರೆ ಅವರು ಸರಿಯಾಗಿ ಸ್ಪಂದಿಸುತ್ತಿಲ್ಲ. ಅವರು ಸುಮಾರು 1 1/2 ವರ್ಷಗಳ ಕಾಲ ಪ್ರತಿ ತಿಂಗಳು ರೂ.1,05,000/- ಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಿರುತ್ತಾರೆ.

**4.** ಸದರಿ ಕಾರಿಗೆ ವಿಮೆ ಹಾಗೂ ಡೀಸೆಲ್ ಖರ್ಚನ್ನು ನನ್ನ ಗಂಡನೇ ಪಾವತಿ ಮಾಡುತ್ತಿದ್ದರು. ಮಾಸಿಕವಾಗಿ ಸುಮಾರು ಎಷ್ಟು ಕಿಲೋ ಮೀಟರ್ ಗಾಡಿ ಓಡಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಶನಿವಾರ ಮತ್ತು ಭಾನುವಾರಗಳಂದು ನನ್ನ ಗಂಡ ಬೇರೆ ಕಡೆ ಬಾಡಿಗೆಗೆ ಹೋಗುತ್ತಿದ್ದರು. ಖರ್ಚು ಕಳೆದು ರೂ.70,000/- ಗಳಿಗಿಂತ ಹೆಚ್ಚು ಉಳಿಯುತ್ತಿತ್ತು. ಕಂಪನಿಯವರು ವಾಹನದ EMI ಯನ್ನು ಕಡಿತ ಮಾಡಿ ಉಳಿದ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿದ್ದರು. ನಿಪಿ-14 ಮತ್ತು 6 ಬೇರೆ ಬೇರೆ ಕಂಪನಿಗೆ ಸೇರಿದ್ದು ಎಂದರೆ ಸಾಕ್ಷಿ ಅವೆರಡೂ ಒಂದೇ ಕಂಪನಿ, ಅಣ್ಣ-ತಮ್ಮನಿಗೆ ಸೇರಿದ್ದು ಎನ್ನುತ್ತಾರೆ. ನಿಪಿ-14 ರಲ್ಲಿ ನಾನು ಹೇಳಿರುವಂತೆ ಮಾಸಿಕವಾಗಿ ರೂ.1,05,000/- ಹಣ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-14 ನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

**5.** ಸದರಿ ಕಾರು ಕಂಪನಿಗೆ ಸೇರಿದ್ದು, ನನ್ನ ಗಂಡ ಕೇವಲ ಚಾಲಕನಾಗಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಕಾರಿನ ಮಾಲೀಕನಾಗಿದ್ದು, ಚಾಲಕನಾಗಿ ಸದರಿ ಕಂಪನಿಗೆ ಹೋಗುತ್ತಿದ್ದರು. ರೂ.4 ಲಕ್ಷ ಹಣವನ್ನು ನಗದು ರೂಪದಲ್ಲಿ 2023 ರಲ್ಲಿ ಕಂಪನಿಗೆ ಪಾವತಿ ಮಾಡಿರುತ್ತೇವೆ. ಸದರಿ ರಶೀದಿ ಕಳೆದು ಹೋಗಿರುತ್ತದೆ. ಕಂಪನಿ ವಿರುದ್ಧ 3-4 ಬಾರಿ ನೋಟೀಸ್ ನೀಡಿದ್ದು, ನಂತರ ನ್ಯಾಯಾಲಯಕ್ಕೆ ಹೋಗಿರುತ್ತೇವೆ. ಸದರಿ ನೋಟೀಸ್ ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈಗಲೂ ಸಹ ಸದರಿ ಕಂಪನಿಯಲ್ಲಿ ನಮ್ಮ ಕಾರನ್ನು

ಉಪಯೋಗಿಸುತ್ತಿದ್ದಾರೆ. ನನ್ನ ಗಂಡ ಮೃತಪಟ್ಟ ನಂತರ ಕಂಪನಿ ಕಾರನ್ನು ಬಳಸಿಕೊಳ್ಳುತ್ತಿದ್ದು, ಯಾವುದೇ ಹಣ ಕೊಡದೇ ಮೋಸ ಮಾಡಿರುತ್ತಾರೆ, ಹಾಗಾಗಿ ಪ್ರಕರಣ ದಾಖಲು ಮಾಡಿರುತ್ತೇವೆ. ನಮ್ಮ 4 ಲಕ್ಷ ಹಣವನ್ನು ಹಾಗೂ ನಾವು ಕಟ್ಟಿದ EMI ಯನ್ನು ಕೊಡುವಂತೆ ಕೇಳಿದಾಗ ಕಂಪನಿಯವರು ನನಗೆ ಬೆದರಿಕೆ ಹಾಕಿರುತ್ತಾರೆ. ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. ನಾನು ವಕೀಲರ ಜೊತೆ ಮಾತನಾಡಿದ್ದು, ಅವರು ಇನ್ನೂ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿಲ್ಲ.

**6.** ಒಂದು ವೇಳೆ ಕಾರು ನಮ್ಮದೇ ಆಗಿದ್ದರೇ ಕಂಪನಿಯವರು ಈಗಲೂ ಸಹ ಬಾಡಿಗೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಕಾರನ್ನು ನಾವು ಖರೀದಿಸಿಲ್ಲ ಎಂದರೆ ಸರಿಯಲ್ಲ. ಕಾರನ್ನು ಕೇಳಿದಾಗ ಕಂಪನಿಯವರು 15-20 ಲಕ್ಷ ಹಣ ಪಾವತಿ ಮಾಡುವಂತೆ ಕೇಳಿರುತ್ತಾರೆ, ನನ್ನ ಬಳಿ ಅಷ್ಟು ಹಣ ಇರುವುದಿಲ್ಲ. ಹೆಚ್ಚು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ Bank Statement ನಲ್ಲಿ ಕಂಪನಿಯಿಂದ ಹಣ ಪಾವತಿಯಾದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಕಂಪನಿಯಿಂದ ರೂ.1,05,000/- ಹಣ ನನ್ನ ಗಂಡನಿಗೆ ಪಾವತಿಯಾಗುತ್ತಿದ್ದ ಬಗ್ಗೆ ಕಂಪನಿಯಿಂದಲೇ ದಾಖಲೆ ಪಡೆದು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಿತ್ತು ಎಂದರೆ ಸಾಕ್ಷಿ ನಾನು ಅವರನ್ನು ಈ ಬಗ್ಗೆ ಕೇಳಿದ್ದು, ಅವರು ದಾಖಲೆ ಕಳೆದು ಹೋಗಿರುತ್ತದೆ ಎಂದು ಹೇಳಿರುತ್ತಾರೆ. ನನ್ನ ಗಂಡನಿಗೆ ಅಷ್ಟು ಆದಾಯ ಇದ್ದಿದ್ದರೇ ನಾನು ದಾಖಲೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. VTT ಕಂಪನಿಯವರನ್ನು ನ್ಯಾಯಾಲಯಕ್ಕೆ ಕರೆಯಿಸಿ ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ.

**7.** ಮೃತರ ಶವ ಸಾಗಾಣಿಕೆ, ಧಾರ್ಮಿಕ ಕಾರ್ಯ ಹಾಗೂ ಶವ ಸಂಸ್ಕಾರ ಇತ್ಯಾದಿಗಳಿಗಾಗಿ ರೂ.1,00,000/- ಗಳನ್ನು ಖರ್ಚು ಮಾಡಿದ ಬಗ್ಗೆ ನ್ಯಾಯಾಲಯಕ್ಕೆ

ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಚಿಕಿತ್ಸೆಗಾಗಿ ರೂ.50,000/- ಗಳನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಎದುರುದಾರರು ಪರಿಹಾರ ಕೊಡಲು ಭಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**